ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 22ನೆ ಆಗಸ್ಟು 1903ನೆ ಇಸವಿ.

1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ವೇರೆ—ಈ ಕೆಳಗೆ ನಮೂದಿಸಿರುವ ತೊಲೆಗಳು ಕಪಿಲಾನದಿ ನೀರಿನ ಕಳೆಯಿಂದ ಹೊಡದುಕೊಂಡು ಬಂದು ಹಾಲಿ ನಂಜನಗೂಡು ಡಿಪೋದಲ್ಲಿ ಇರುವದು. ಇದರ ಹಕ್ಕುದಾರ್ರು ಯಾರಾದರೂ ಇದ್ದಲ್ಲಿ ಸದರಿ ತೊಲೆಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟೆಮೆಂಟನ್ನು ಈ ಲಾಗಾಯಿತು ಒಂದು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರಲ್ಲಿ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ತೊಲೆಗಳ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರ್ಕಾರಕ್ಕೆ ವಳಪಡಿಸಿಕೊಳ್ಳುವದು.

ಸದರಿ ತೊಲೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರಪಡಿಸಿದಕ್ಕೆ ತಗಲಿದ ಲಾಗವಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ :—

ನಂಬರು.	ತೊಲೆ ವಿವರ.	ಗುರ್ತು.	ಲಾಂಬಿ.		ಸುತ್ತು.		ಸಲೆ ಅಡಿ.
			ಅಡಿ.	ಅಂ.	ಅಡಿ.	ಅಂ.	
1	ಸಾಗುವಾನಿ ತೊಲೆ ...	3 ಭಾಗದಲ್ಲಿ ಸೋಲ್ಡ್ ಎಂದು ಇದೆ. V ಗುರ್ತು ಇದೆ.	13	5	6	..	30

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

1903ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನ IIನೇ ಭಾಗದ 459ನೆ ಪುಟದಲ್ಲಿ ತಂಗಡಿ ಮತ್ತು ಕಕ್ಕೆ ಚೆಕ್ಕೆ ಹರಾಜು ವಿಷಯದಲ್ಲಿ ಫಾಯಿಷಾಗಿ ಇರುವ ನೋಟಿಫಿಕೇಷನನ್ನು ಎಲ್ಲರೂ ನೋಡತಕ್ಕದ್ದು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಸ್ರ 1903ನೆ ಇಸವಿ ಜುಲೈ ತಾರೀಖು.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1903ನೆ ಇಸವಿ ಅಕ್ಟೋಬರ್ ಗುರ್ರೆ ಲಾಗಾಯಿತು 1904ನೆ ಇಸವಿ ಜೂನ್ ಅಖೈರುವರಿಗೆ 9 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡೀ ಕಾಣಿಸಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಟೋಲುಗೇಟು ಹೆಸರು.	ಹರಾಜ್ ತಾರೀಖು.	ಹರಾಜು ನಡಿಸುವ ಸ್ಥಳ.
1	ಕೊಟ್ಟಗೆಹಾರ್ (ಬೂಂದುಘಾಟ್)	7ನೆ ಸೆಪಟಂಬರ್ 1903	ಮೂಡಿಗೆರೆ ತಾಲ್ಲೂಕು ಕಚೇರಿಯಲ್ಲಿ
2	ಬಾಳೆಹೊನ್ನೂರು (ಭದ್ರಾನದೀಸೇತುವೆ)	10ನೆ ಸೆಪಟಂಬರ್ 1903	ಬಾಳೆಹೊನ್ನೂರು ಮುಸಾಫರ ಬಂಗಲೆಯಲ್ಲಿ
3	ತಡಸ (ಭದ್ರಾನದಿ ಸೇತುವೆ)	7ನೆ ಸೆಪಟಂಬರ್ 1903	ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ
4	ಹರಿಹರಪುರ (ತುಂಗಾನದೀ ಸೇತುವೆ)	10ನೆ ಸೆಪಟಂಬರ್ 1903	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಚಡದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗ್ಯಾರ್ನಮೆಂಟ್ ಹರಾಜಾಗಿ ಬಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಭಡ ದರಖಾಸ್ತನ್ನಾಗಲಿ ಯಾವ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.